ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 468

02. ಮಾನ್ಯ ಸದಸ್ಯರ ಹೆಸರು : ಶ್ರೀ ಆರ್.ಬಿ. ತಿಮ್ಮಾಪೂರ (ವಿಧಾನ ಸಭೆಯಿಂದ ಚುನಾಯಿತರಾದವರು)

03. ಉತ್ತರಿಸುವ ದಿನಾಂಕ : 16-12-2021

04. ಉತ್ತರಿಸುವ ಸಚಿವರು : ಗೃಹ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಸೈಬರ್ ಅಪರಾಧ ಪ್ರಕರಣಗಳಲ್ಲಿ ಬೆಂಗಳೂರು ಮೊದಲನೇ ಸ್ಥಾನದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="2">ಬೆಂಗಳೂರು ನಗರದ ಸೈಬರ್ ಕ್ರೈಂ ಪೊಲೀಸ್ ಠಾಣೆಗಳಲ್ಲಿ 2019ನೇ ಸಾಲಿನಿಂದ 2021ರ ನವೆಂಬರ್ ಮಾಹೆಯವರೆಗೆ ದಾಖಲಾಗಿರುವ ಅಪರಾಧ ಪ್ರಕರಣಗಳನ್ನು ಪರಿಶೀಲಿಸಲಾಗಿ ವರ್ಷದಿಂದ ವರ್ಷಕ್ಕೆ ಪ್ರಕರಣಗಳ ವರದಿಗಳು ಇಳಿಮುಖವಾಗಿರುವುದು ಕಂಡು ಬಂದಿರುತ್ತದೆ, ಸದರಿ ಪ್ರಕರಣಗಳ ಅಂಕಿ ಅಂಶದ ವಿವರಗಳು ಈ ಕೆಳಕಂಡಂತಿದೆ.
<table><tr><th>ಕ್ರ.ಸಂ</th><th>ವರ್ಷವಾರು</th><th>ವರದಿಯಾಗಿರುವ ಪ್ರಕರಣಗಳ ಸಂಖ್ಯೆ</th><th>ಪತ್ತೆಯಾದ ಪ್ರಕರಣಗಳ ಸಂಖ್ಯೆ</th></tr><tr><td>1</td><td>2019</td><td>10275</td><td>2109</td></tr><tr><td>2</td><td>2020</td><td>8570</td><td>2264</td></tr><tr><td>3</td><td>2021 (30.11.2021)</td><td>5544</td><td>356</td></tr></table>
ಸೈಬರ್ ಅಪರಾಧಗಳನ್ನು ತಡೆಗಟ್ಟಲು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಂಬಂಧ ಸರ್ಕಾರವು ಕೈಗೊಂಡಿರುವ ಕ್ರಮಗಳನ್ನು ಅನುಬಂಧದಲ್ಲಿ ವಿವರಿಸಲಾಗಿದೆ.</td></tr>
<tr><td>ಆ</td><td>ಬಂದಿದ್ದಲ್ಲಿ, ವರ್ಷದಿಂದ ವರ್ಷಕ್ಕೆ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವುದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td></tr>
<tr><td>ಇ</td><td>ನಗರದಲ್ಲಿ ಹೊಸದಾಗಿ 8 ಸೈಬರ್ ಮತ್ತು ಆರ್ಥಿಕ ಅಪರಾಧ (ಸೆನ್) ಪೊಲೀಸ್ ಠಾಣೆಗಳನ್ನು ಸ್ಥಾಪಿಸಿ ಎರಡು ವರ್ಷಗಳು ಕಳೆದರೂ ಸರ್ಕಾರ ಅವುಗಳಿಗೆ ಮೂಲಸೌಕರ್ಯ ಹಾಗೂ ಅಗತ್ಯ ಸಿಬ್ಬಂದಿಗಳನ್ನು ನೇಮಿಸಲು ಮುತುವರ್ಜಿ ವಹಿಸದಿರಲು ಕಾರಣಗಳೇನು?</td><td>1. ಬೆಂಗಳೂರು ನಗರದ ಪೊಲೀಸ್ ಆಯುಕ್ತರ ಘಟಕದ 09 ಸೆನ್ ಪೊಲೀಸ್ ಠಾಣೆಗಳಿಗೆ ಅವಶ್ಯವಿರುವ ವಾಹನ ಮತ್ತು ಸಾಧನ ಸಾಮಗ್ರಿಗಳನ್ನು ಖರೀದಿಸಲು ರೂ. 04.00 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
2. ಎ.ಡಿ.ಜಿ.ಪಿ ಪೊಲೀಸ್ ಗಣಕ ವಿಭಾಗ ರವರು ಸೆನ್ ಪೊಲೀಸ್ ಠಾಣೆಗಳಿಗೆ ಅಗತ್ಯ ಸೈಬರ್ ಫೋರೆನ್ಸಿಕ್ ಇಕ್ವಿಪ್‌ಮೆಂಟ್ಸ್, ಸಾಫ್ಟ್‌ವೇರ್, ಹಾರ್ಡ್‌ವೇರ್ ಹಾಗೂ ಅಗತ್ಯ ಲ್ಯಾಪ್‌ಟಾಪ್‌ಗಳನ್ನು ಒದಗಿಸಿರುತ್ತಾರೆ.
3. ಸೆನ್ ಪೊಲೀಸ್ ಠಾಣೆಗಳಿಗೆ ಪಿಐ ಯಿಂದ ಪಿಸಿ ವರೆಗೆ 56 ಹುದ್ದೆಗಳಿಗೆ ಮಂಜೂರಾತಿ ಆದೇಶ ನೀಡಿದ್ದು, ಸದರಿ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.
4. ಸೆನ್ ಪೊಲೀಸ್ ಠಾಣೆಗಳಿಗೆ 8 ಪಿಎಸ್ಐ ಹುದ್ದೆಗಳನ್ನು ಹೆಚ್ಚುವರಿಯಾಗಿ ಮರುಹಂಚಿಕೆ ಮುಖಾಂತರ ಭರ್ತಿ ಮಾಡಲಾಗಿದೆ.
5. 09 ಸೆನ್ ಪೊಲೀಸ್ ಠಾಣೆಗಳಿಗೆ ಅಗತ್ಯ 16 ತಾಂತ್ರಿಕ ತಜ್ಞರ ಹುದ್ದೆಗಳನ್ನು ಒಪ್ಪಂದದ ಮುಖಾಂತರ ನೇಮಕಾತಿ ಮಾಡಿಕೊಳ್ಳುವ ಸಂಬಂಧ ನೇಮಕಾತಿ ಸಮಿತಿಯನ್ನು ರಚಿಸಲಾಗಿದೆ.</td></tr>
</table>

ಒಇ 40 ಪಿಸಿಕ್ಯೂ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಅನುಬಂಧ

1. ಸೈಬರ್ ಅಪರಾಧಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಲು ಹಾಗೂ ತಡೆಗಟ್ಟಲು ರಾಜ್ಯದ ಪ್ರತಿ ಜಿಲ್ಲೆ ಹಾಗೂ ನಗರಗಳಲ್ಲಿ ವಿಶೇಷ ಸೈಬರ್, ನಾರ್ಕೋಟಿಕ್ ಎಕನಾಮಿಕ್ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗಿದೆ. ಬೆಂಗಳೂರು ನಗರದ ವಿಭಾಗ ಮಟ್ಟದಲ್ಲಿ 9 ಸೆನ್ ಪೊಲೀಸ್ ಠಾಣೆಗಳು ಸೇರಿದಂತೆ, ರಾಜ್ಯದಲ್ಲಿ ಒಟ್ಟು 46 ಸೆನ್ ಪೊಲೀಸ್ ಠಾಣೆಗಳು ಹಾಗೂ ಸಿಐಡಿ ವಿಭಾಗದಲ್ಲಿ ಸೈಬರ್ ಪೊಲೀಸ್ ಠಾಣೆಯು ಕಾರ್ಯ ನಿರ್ವಹಿಸುತ್ತಿವೆ.

2. ಸೈಬರ್ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಸೆನ್ ಪೊಲೀಸ್ ಠಾಣೆಗಳಿಗೆ ಸೆನ್ ಫಾರೆನ್ಸಿಕ್ ಎಕ್ವಿಪ್‌ಮೆಂಟ್ ಸಲಕರಣೆಗಳನ್ನು ಒದಗಿಸಲಾಗಿದ್ದು, ಪ್ರಕರಣಗಳು ವರದಿಯಾದ ಕೂಡಲೇ ಸಿಐಆರ್ ಸಾಫ್ಟ್‌ವೇರ್‌ನಲ್ಲಿ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಕ್ರಮಕೈಗೊಳ್ಳಲಾಗಿದೆ.

3. ಸೈಬರ್ ಪೊಲೀಸ್ ಠಾಣೆಯ ಅಧಿಕಾರಿ/ಸಿಬ್ಬಂದಿಗಳಿಗೆ ಸೈಬರ್ ಅಪರಾಧವನ್ನು ತಡೆಗಟ್ಟುವ ಕುರಿತು ವಿಶೇಷ ತರಬೇತಿಯನ್ನು (Advance Technology Training) ನೀಡಲಾಗಿದೆ ಹಾಗೂ ಸಿಐಡಿಯ ನ್ಯಾಸ್‌ಕಾಂ ಲ್ಯಾಬ್‌ನಲ್ಲಿ ಮಿಲಿಟರಿ, ಬ್ಯಾಂಕಿಂಗ್ ಸೆಕ್ಟರ್, ಸರ್ಕಾರಿ ಸಂಸ್ಥೆಗಳು, ಸರ್ಕಾರಿ ಅಭಿಯೋಜಕರಿಗೆ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ಸೈಬರ್ ಅಪರಾಧಗಳನ್ನು ಪತ್ತೆ ಮಾಡುವ ಹಾಗೂ ತಡೆಗಟ್ಟುವ ಬಗ್ಗೆ ತರಬೇತಿ ನೀಡಲಾಗಿದೆ.

4. ಯಾವುದೇ ಕಾರಣಕ್ಕೂ ಓಟಿಪಿ ಸಂದೇಶವನ್ನು / ಕೋಡ್‌ಗಳನ್ನು ಯಾರಿಗೂ ನೀಡಬಾರದೆಂದು / ಬ್ಯಾಂಕಿನ ಕಸ್ಟಮರ್ ಕೇರ್ ನಂಬರ್‌ನ್ನು ಗೂಗಲ್‌ನಲ್ಲಿ ಹುಡುಕಿ ಕರೆ ಮಾಡದಂತೆ ಹಾಗೂ ಅಪರಿಚಿತ ಮೂಲದಿಂದ ಮೊಬೈಲ್‌ಗೆ ಬರುವ ಲಿಂಕ್‌ಗಳನ್ನು ಕ್ಲಿಕ್ ಮಾಡಬಾರದೆಂದು ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟ್ವಿಟ್ಟರ್, ಇನ್ಸ್ಟಾಗ್ರಾಂ ಹಾಗೂ ವ್ಯಾಟ್ಸ್‌ಅಪ್‌ಗಳ ಮೂಲಕ ಸೈಬರ್ ಜಾಗೃತಿಯ ಸಂದೇಶಗಳನ್ನು ಹಾಗೂ ಮುದ್ರಣ ಮಾಧ್ಯಮಗಳ ಮುಖಾಂತರ ವರದಿಗಳನ್ನು ಪ್ರಕಟಿಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿಯನ್ನುಂಟು ಮಾಡಲಾಗುತ್ತಿದೆ.

5. ಬ್ಯಾಂಕ್ ಕಟ್ಟಡದಲ್ಲಿರುವ ಹಾಗೂ ರಕ್ಷಣಾ ಸಿಬ್ಬಂದಿ ಇರುವ ಎಟಿಎಂಗಳನ್ನೇ ಆದಷ್ಟು ಬಳಸುವಂತೆ, ಪಿನ್ ನಂಬರ್ ಟೈಪ್ ಮಾಡುವಾಗ ಯಾರೂ ನೋಡದಂತೆ ಎಚ್ಚರ ವಹಿಸಲು ಸಾರ್ವಜನಿಕರ ಗಮನಕ್ಕೆ ತರಲಾಗುತ್ತಿದೆ.

6. ಆನ್‌ಲೈನ್ ಮೂಲಕ ಉದ್ಯೋಗ ಕೊಡಿಸುವುದಾಗಿ ಹಣ ಕೇಳುವವರ ಮಾಹಿತಿ ಬಗ್ಗೆ, ಉಡುಗೊರೆ ಕಳುಹಿಸುತ್ತಿರುವುದಾಗಿ ನಂಬಿಸುವವರ ವಂಚನಾ ಜಾಲದ ಬಗ್ಗೆ, ಆನ್ ಲೈನ್ ಮೂಲಕ ಮದುವೆಯಾಗುವುದಾಗಿ ನಂಬಿಸುವವರ ಬಗ್ಗೆ ಎಚ್ಚರ ವಹಿಸುವಂತೆ, ಹರ್ಬಲ್ ಉತ್ಪನ್ನಗಳ ವ್ಯವಹಾರದಲ್ಲಿ ಹಣ ಗಳಿಸಬಹುದೆಂದು ಬಣ್ಣಿಸುವವರ ಬಗ್ಗೆ, ಸಾಮಾಜಿಕ ಜಾಲತಾಣದ ಮೂಲಕ ವಸ್ತುಗಳನ್ನು ಖರೀದಿಸುವಾಗ ಎಚ್ಚರ ವಹಿಸುವಂತೆ, ಲಾಟರಿ ಗೆದ್ದಿರುತ್ತೀರಿ ಎಂಬುದಾಗಿ ಬಹುಮಾನ ಸಂದೇಶ/ಕರೆಗಳ ಬಗ್ಗೆ, ಅಪರಿಚಿತರೊಂದಿಗೆ ಆನ್‌ಲೈನ್ ಮೂಲಕ ಗೆಳೆತನ ಬೆಳೆಸಬಾರದಾಗಿ, ಸಿಮ್‌ಕಾರ್ಡ್ ಸ್ಥಗಿತಗೊಂಡಲ್ಲಿ ತಕ್ಷಣ ಬ್ಯಾಂಕಿಗೆ ಕರೆ ಮಾಡಿ ಮಾಹಿತಿ ನೀಡುವುದರ ಕುರಿತು ಮುಂಜಾಗ್ರತಾ ಕ್ರಮಗಳನ್ನು ವಹಿಸುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ.